ಕೊಳ್ಳಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ತಾವು ಇದನ್ನು ಇಲ್ಲಿ ಎತ್ತುವುದಕ್ಕೆ ಮುನ್ನ ಕ್ರಮ ತೆಗೆದುಕೊಂಡಿದ್ದೇನೆ.

ಶ್ರೀ ವಿ. ಎಂ. ಘಾಡಿ.— ಮಾನ್ಯ ಅಧ್ಯಕ್ಷರೇ, ದಾಂಡೇಲಿಯಲ್ಲಿ, ಏಪ್ರಿಲ್ ತಿಂಗಳಿಂದ ಅಲ್ಲಿನ ಕೆಲಸಗಾರರಿಗೆ ಮ್ಯಾನೇಜಮೆಂಟನವರು ಪಗಾರವನ್ನು ಕೊಟ್ಟಿಲ್ಲ. ಲೇಬರ ಕಮಿಷನರ ಅವರು ಹುಕುಂ ಮಾಡಿದರೂ ಸಹಿತ ಮ್ಯಾನೇಜಮೆಂಟನವರು ಪಗಾರ ಕೊಟ್ಟಿಲ್ಲ. ಆ ರೀತಿ ಇವತ್ತು ನನಗೆ ಟ್ರಂಕ್ ಕಾಲ್ ಬಂದಿದೆ. ಮ್ಯಾನೇಜಮೆಂಟನವರು ಕಾರ್ಮಿಕರ ಯಾವ ಡಿಮ್ಯಾಂಡನ್ನೂ ಕೇಳುವುದಕ್ಕೆ ತಯಾರಿಲ್ಲ. ಅಲ್ಲಿ ಧರಣಿ ಸತ್ಯಾಗ್ರಹ ನಡೆದಿದೆ. ಆದ್ದರಿಂದ ಸರ್ಕಾರದವರು ಆ ಮ್ಯಾನೇಜಮೆಂಟನ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಬೇಕು ಮತ್ತು ಅದನ್ನು ಕೂಡಲೇ ರಾಷ್ಟ್ರೀಕರಣ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

Sri H. M. CHANNABASAPPA.— It is purely a dispute between the management and the workers. It is a labour dispute and the Labour Commissioner will have to consider it.

Mr. DEPUTY SPEAKER.— The Labour Commissioner and the Minister for Labour are seized of it.

ALLEGED POLICE EXCESSES ON LABOURERS IN HALEBID

†ಶ್ರೀ ವಿ. ಎನ್. ಪಾಟೀಲ.— ಕ್ರಮಬದ್ಧವಾಗಿ ನಿಯಮದ ಪ್ರಕಾರ ನೋಟೀಸ ಕಳುಹಿಸಿ ಎಂದು ಮಾನ್ಯ ಅಧ್ಯಕ್ಷರು ಹೇಳಿದರು.

Mr. DEPUTY SPEAKER.— It has been sent to the Government. As soon as we get reply it will be taken up.

Sri V. N. PATIL.— If the Minister makes up his mind he can get reply by this evening.

ಹಳೇಬೀಡು ಗ್ರಾಮದಲ್ಲಿ ಪೋಲೀಸ್ ಹೆಡ್ ಕಾನ್ಸ್‌ಟೇಬಲ್....

ಶ್ರೀ ಕೆ. ಪುಟ್ಟಸ್ವಾಮಿ.— ನಮಗೆ ರಕ್ಷಣೆ ಇಲ್ಲವೇ, ಒಂದು ಗಂಟೆ, ಎರಡು ಗಂಟೆಯಿಂದ ಇಂಟರಪಷನ್ಸ್ ಆಗುತ್ತದೆ, ಬೇರೆ ಕಾರ್ಯಕ್ರಮಗಳು ಎಷ್ಟೋ ಇವೆ, ಅದರಲ್ಲಿ ಭಾಗವಹಿಸಲು ನಾನು ಅಪೇಕ್ಷೆವುಳ್ಳವನಾಗಿದ್ದೇನೆ, ನಮಗೆ ರಕ್ಷಣೆ ಇಲ್ಲವೇ ?

Mr. DEPUTY SPEAKER.— You will have it.

ಶ್ರೀ ವಿ. ಎನ್. ಪಾಟೀಲ.— ಪೋಲೀಸ್ ಕಾನ್ಸ್‌ಟೇಬಲ್ ನೈಟ ಟೈಂ, ಬರಗಾಲಪೀಡಿತ ಪ್ರದೇಶದಿಂದ ಬಂದಂಥ ಕಾರ್ಮಿಕರ ಮನೆಯಲ್ಲಿ ನುಗ್ಗಿ, ಮುದುಕರನ್ನು, ಮಕ್ಕಳನ್ನು ಬೇರ್ಪಡಿಸಿ ೨–೩ ಹೆಣ್ಣುಮಕ್ಕಳನ್ನು ಕರೆದುಕೊಂಡು ಹೋಗಿ ಅವರ ಮೇಲೆ ಫಿಸಿಕಲ್ ಅಸಾಲ್ಟ್ ಮಾಡಿದ್ದಾನೆ, ನೀಚ ಕೆಲಸಮಾಡಿದ್ದಾನೆ,

ಇದಕ್ಕಿಂತ ಹೆಚ್ಚಿನ ಕೆಲಸವನ್ನು ನಾವು ಈ ಮನೆಯಲ್ಲಿ ಕೂತು ಮಾಡುವುದು ಏನು ಇದೆ? ನನ್ನ ಮಿತ್ರರಿಗೂ ಈ ಪ್ರೊಸಿಡಿಂಗ್ಸ್‌ನಲ್ಲಿ ಭಾಗವಹಿಸಬೇಕು ಎನ್ನುವ ಕುತೂಹಲ ಇದೆ. ಆ ಅಬಲೆಯರ ಮೇಲೆ, ಗಂಡಸರನ್ನು, ಹುಡುಗರನ್ನು ಬಡಿದು, ಹೆಡ್‌ಕಾನ್ಸ್‌ಟೇಬಲ ಮಾನಹರಣ ಮಾಡಿದ್ದಾನೆ. ಇದರ ಬಗ್ಗೆ ನೋಟೀಸ ಕೊಟ್ಟಿದ್ದೇನೆ, ಒಂದು ವಾರವಾದರೂ ಉತ್ತರ ಬರದಿದ್ದರೆ ಹೇಗೆ ಟಾಲರೇಟ ಮಾಡೋಣ?

Mr. DEPUTY SPEAKER.— We are pursuing the matter.

MYSORE STATE AGRICULTURAL UNIVERSITIES BILL 1973—POINTS OF ORDERS ABOUT CONSIDERING THE BILL

3-00 P.M.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಈಗ ಮಾನ್ಯ ವ್ಯವಸಾಯ ಸಚಿವರು ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಈ ಮಸೂದೆಯನ್ನು ತಂದಿದ್ದಾರೆ. ಹಿಂದೆ ಈ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೊಸ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕಾದರೆ ಯೂನಿವರ್ಸಿಟಿ ಗ್ರಾಂಟ್ ಕಮೀಷನ್ ಒಪ್ಪಿಗೆ ಪಡೆಯದೇ ಹೊಸ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುವುದಿಲ್ಲ ಎನ್ನುವ ಮಾತನ್ನು ಸದನದಲ್ಲಿ ಹೇಳಿದ್ದಾರೆ. ಆದರ ಜೊತೆಗೆ ಹೊಸ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಬೇಕಾದರೆ ಈಗ ತಂದಿರ ತಕ್ಕ ಮಸೂದೆ ಯು. ಜಿ. ಸಿ.ಗೆ ಕಳುಹಿಸಿಲ್ಲ ಮತ್ತು ಅವರ ಅನುಮತಿ ಪಡೆದಿಲ್ಲ. ಹೊಸ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಬೇಕಾದರೆ ರಾಷ್ಟ್ರದಲ್ಲಿ ಒಂದು ಪದ್ಧತಿಯಿದೆ, ನಿಯಮವಿದೆ, ಯು. ಜಿ. ಸಿ. ಕಾನೂನು ಇದೆ. ಇದು ಯಾವುದನ್ನೂ ಪಾಲನೆ ಮಾಡದೇ ಮಸೂದೆಯನ್ನು ಸದನಕ್ಕೆ ತರುವುದಕ್ಕೆ ಹೊರಟಿರತಕ್ಕದ್ದನ್ನು ನಾವು ಯಾರೂ ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುವುದು ಏನಂದರೆ ದಯವಿಟ್ಟು ಮಾನ್ಯ ಕೃಷಿ ಸಚಿವರು ಉತ್ಸಾಹದ ದಾಹದಲ್ಲಿ ಮುಂದೆ ಹೋಗಿ ಮಂಡಿಸುವುದು ಬೇಡ. ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಮುಂಚೆ ಕೇಂದ್ರ ಸರ್ಕಾರ ಅಥವಾ ಯು. ಜಿ. ಸಿ. ಅವರ ಅಭಿಪ್ರಾಯ ಪಡೆದು ಅವರು ಸೂಚಿಸಬಹುದಾದಂಥ ಸಲಹೆಗಳನ್ನು ಅಳವಡಿಸಿ ಇಲ್ಲಿ ತರಬೇಕು. ಅಲ್ಲಿಯ ವರೆಗೆ ಈ ಮಸೂದೆಯ ಚರ್ಚೆಗೆ ಒತ್ತಾಯ ಮಾಡಬಾರದು. ಇದನ್ನು ವಾಪಸ್ಸು ಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಕೆ. ಎಚ್. ಹನುಮೇಗೌಡ.—ಈ ಬಿಲ್ ಬಿಸಿನೆಸ್ ಅಡವೈಜರಿ ಕಮೀಟಿಯಲ್ಲಿ ಅಪ್ರೂವ್ ಆಗಿಲ್ಲ. ೭ ದಿವಸ ಕಾಲಾವಕಾಶದ ನೋಟೀಸು ಇಲ್ಲದೇ ಇದನ್ನು ತಂದಿದ್ದಾರೆ. ಅದು ಒಂದು ವಿಚಾರ. ಇನ್ನು ಎರಡನೆಯ ವಿಚಾರ ರಾಜ್ಯದಲ್ಲಿ ಎರಡನೆಯ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪನೆಯ ಬಗ್ಗೆ ಮುಖ್ಯ ಮಂತ್ರಿಗಳು ಸದನದಲ್ಲಿ ಹೇಳಿಕೆ ಕೊಟ್ಟಿರುವುದನ್ನು ಕಾಗೋಡು ತಿಮ್ಮಪ್ಪನವರು ಹೇಳಿದ್ದಾರೆ. ಆದರ ಪರಿಣಾಮ ಏನು ಆಗುತ್ತದೆ? ಯು. ಜಿ. ಸಿ. ಒಪ್ಪದೇ ಐ. ಸಿ. ಎ. ಆರ್. ಗ್ರಾಂಟ್ ಕೊಡದೇ